## ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.
## ಸಿ.ಸಿ ನಂಃ 660/ 2017

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ ಭೀಮರಾಯ | ಫ್ರಾಸಾಃ **04** |
| ತಂದೆ ಹೆಸರುಃ | ಸಾಬಣ್ಣ | ಚಾಸಾಃ **02** |
| ವಯಸ್ಸುಃ | **42** ವರ್ಷ | ದಿಃ **10-09-2025** |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಅರಕೇರಾ ಕೆ ಗ್ರಾಮ | |

### ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನನಗೆ ಚಾಸಾಃ 1 ಮತ್ತು 3 ರವರ ಪರಿಚಯ ಇಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಹಿಂದೆ ಗ್ರಾಮ ಪಂಚಾಯಿತಿಯ ಸದಸ್ಯನಾಗಿದ್ದಾಗ ಒಬ್ಬ ಬೀಟ್ ಪೋಲಿಸ್ ಪಂಚಾಯಿತಿಗೆ ಬಂದು ಒಂದು ದಾಖಲೆಗೆ ನನ್ನ ಸಹಿ ಪಡೆದುಕೊಂಡು ಹೋಗಿದ್ದರು. ಸಾಕ್ಷಿಯು ಗುನ್ನೆಜಾಗೆ ಪಂಚನಾವೆಯಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-6 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-6 ಎ ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ಬರೆದ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ.

( ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದರು - ಅನುಮತಿ ನೀಡಲಾಯಿತು)

### ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ

ದಿಃ 01-05-2017 ರಂದು ಪೋಲಿಸರು ನನ್ನನ್ನು ಮತ್ತು ಚಾಸಾಃ 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಯಾದಗಿರಿ-ಗುರುಮಠಕಲ್ ರಸ್ತೆಯಲ್ಲಿ ಬರುವ ನೀರಿನ ಘಟಕದ ಹತ್ತಿರ ಬೆಃ 10-45 ರಿಂದ 11-50 ವರೆಗೆ ನಿಪಿ-6 ರಂತೆ ಸ್ಥಳ ಪಂಚನಾಮೆ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಹಾಜರಿದ್ದು ಪಂಚನಾಮೆಗೆ ಸಹಿ ಮಾಡಿದ್ದೆನು ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿತರ ಪರಃ  ವಕೀಲರವರಿಂದಃ

ಯಾವುದೇ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ.

# ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

**ಸಿ.ಸಿ ನಂಃ 660/ 2017**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ ಬನ್ನಪ್ಪ | ಫ್ರಾಸಾಃ **05** |
| ತಂದೆ ಹೆಸರುಃ | ರಾಮಪ್ಪ | ಚಾಸಾಃ **06** |
| ವಯಸ್ಸುಃ | **29** ವರ್ಷ | ದಿಃ **10-09-2025** |
| ಉದ್ಯೋಗಃ | ಖಾಸಗಿ ಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಅರಕೇರಾ ಕೆ ಗ್ರಾಮ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ನನಗೆ ಚಾಸಾಃ 1 ರವರ ಪರಿಚಯ ಇಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

( ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದರು - ಅನುಮತಿ ನೀಡಲಾಯಿತು)

ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ

ನಾನು 2017 ರಿಂದ ಯಾದಗಿರಿ ನಗರದ ಹೊರ ವಲಯದಲ್ಲಿ ಇರುವ ರಾಜೇಂದ್ರ ಆಗ್ರೋ ಇಂಡಸ್ಟ್ರಿಸ್ ನಲ್ಲಿ ಮೇಲ್ವಿಚಾರಕನಾಗಿ ಕೆಲಸ ಮಾಡಿಕೊಂಡು ಬಂದಿರುತ್ತೇನೆ ಎಂದರೆ ಸರಿ. ದಿಃ 30.04.2017 ರಂದು ಬೆಃ 09.00 ಗಂಟೆಗೆ ನಾನು ಪ್ರತಿ ದಿನದಂತೆ ಕೆಲಸಕ್ಕೆ ಹೋಗಿದ್ದು, ಆ ದಿನ ಯಾರೋ ಇಬ್ಬರು ವ್ಯಕ್ತಿಗಳು ಟಾಟಾ ಎಸ್ ವಾಹನದಲ್ಲಿ ಹತ್ತಿ ಮಾರಾಟ ಮಾಡಲು ನಮ್ಮ ಕಂಪನಿಗೆ ಬಂದಿದ್ದರು ಎಂದರೆ ಸರಿ. ಅವರುಗಳು ನಮಗೆ ಹತ್ತಿ ಮಾರಾಟ ಮಾಡಿ ಬಿಲ್ ಮತ್ತು ಹಣವನ್ನು ಪಡೆದುಕೊಂಡು ಮಃ 12.00 ಗಂಟೆ ಸುಮಾರಿಗೆ ತಮ್ಮ ವಾಹನದಲ್ಲಿ ನಮ್ಮ ಕಂಪನಿಯಿಂದ ಹೋಗಿದ್ದರು ಎಂದರೆ ಸರಿ. ಮರುದಿನ ನಾನು ಕಂಪನಿಗೆ ಕೆಲಸಕ್ಕೆ ಹೋದಾಗ ನಮ್ಮ ಮ್ಯಾನೇಜರ ಮತ್ತು ಚಾಸಾಃ 5 ರವರು ಹಿಂದಿನ ದಿನ ಹತ್ತಿ ಮಾರಾಟ ಮಾಡಿ ಹಣ ಪಡೆದುಕೊಂಡು ಹೋಗಿದ್ದ ಚಾಸಾಃ 1 ಮತ್ತು 4 ರವರನ್ನು ಯಾರೋ ಮೂರು ಜನ ಅಪರಿಚಿತರು ಅರಕೇರಾ ಸಮೀಪ ರಸ್ತೆಯ ಮೇಲೆ ತಡೆದು ನಿಲ್ಲಿಸಿ ಅವರಿಂದ ರೂ.71336/- ಹಣವನ್ನು ಕಿತ್ತುಕೊಂಡು ಹೋಗಿದ್ದರು ಎಂಬುದಾಗಿ ತಿಳಿಸಿದ್ದರು ಎಂದರೆ ಸರಿ. ಸದರಿ ಅಪಚಿತರು ಹಣ ಕಿತ್ತುಕೊಂಡು ಕಾರಿನಲ್ಲಿ ಕುಳಿತು ನಾರಾಯಣ ಪೇಟ್ ಕಡೆಗೆ ಹೋಗಿರುತ್ತಾರೆ ಎಂದು ನನಗೆ ಚಾಸಾಃ 5 ಮತ್ತು ನಮ್ಮ

ಮ್ಯಾನೇಜರ್ ರವರು ತಿಳಿಸಿದ್ದರು ಎಂದರೆ ಸರಿ. ಅಲ್ಲದೇ ಈ ವಿಷಯವನ್ನು ನಮ್ಮೂರಿನ ಗೇಟಿಪಿ ಹತ್ತಿರ ಜನರು ಸಹ ಮಾತನಾಡುತ್ತಿದ್ದರು ಎಂದರೆ ಸರಿ. ಈ ಮೇಲಿನಂತೆ ನೀವು ಪೋಲಿಸರಿಗೆ ಹೇಳಿಕೆ ನೀಡಿದ್ದೀರಿ ಎಂದರೆ ಸಾಕ್ಷಿಯು ನಮ್ಮೂರಿನ ಜನ ಮಾತನಾಡುತ್ತಿದ್ದರು ಎಂಬುದನ್ನು ಮಾತ್ತ ಪೋಲಿಸರಿಗೆ ಹೇಳಿದ್ದೆನು ಎಂದು ನುಡಿದಿದ್ದು, ಸಾಕ್ಷಿಯು ಅಲ್ಲಗಳೆದ ಭಾಗವನ್ನು ನಿಪಿ-7 ಎಂದು ಗುರುತಿಸಲಾಯಿತು. ನಿಪಿ-7 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ಪರಃ ಶ್ರಿ ಎಸ್.ಎಸ್.ಪಿ ವಕೀಲರವರಿಂದಃ</u>

ನಾನು ಕಳೆದ 10 ವರ್ಷಗಳಿಂದ ರಾಜೇಂದ್ರ ಆಗ್ರೋ ಇಂಡಸ್ಟ್ರೀಸ್ ನಲ್ಲಿ ಕೆಲಸ ಮಾಡುತ್ತಿದ್ದೇನೆ. ಹತ್ತಿ ಮಾರಾಟ ಮಾಡಲು ನಮ್ಮ ಅಂಗಡಿಗೆ ಪ್ರತೀ ದಿನ ಸಾಕಷ್ಟು ವಾಹನಗಳು ಬರುತ್ತವೆ ಎಂದರೆ ಸರಿ. ನನಗೆ ಆ ರೀತಿ ಬರುವ ಎಲ್ಲಾ ಜನರ ಹೆಸರು ಹಾಗೂ ಎಲ್ಲಾ ವಾಹನಗಳ ನೊಂದಣಿ ನಂಬರುಗಳು ಗೊತ್ತಿರುವುದಿಲ್ಲ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲಿಸರು ನಿಮ್ಮನ್ನು ಠಾಣೆಗೆ ಕರೆಸಿ ಹೇಳಿಕೆ ಪಡೆದುಕೊಂಡಿದ್ದಾರೆಯೇ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ದಿನಾಂಕ 30.04.2017 ರಂದು ಚಾಸಾಃ 1 ಮತ್ತು 4 ರವರು ನಮ್ಮ ಕಂಪನಿಗೆ ಹತ್ತಿ ಮಾರಾಟ ಮಾಡಿ ಹಣ ಪಡೆದುಕೊಂಡು ಹೋಗುತ್ತಿದ್ದಾಗ ಮೂರು ಜನ ವ್ಯಕ್ತಿಗಳು ಅವರನ್ನು ರಸ್ತೆಯಲಿಲ ತಡೆದು ನಿಲ್ಲಿಸಿ ಹಣ ಕಿತ್ತುಕೊಂಡು ಹೋಗಿದ್ದರು ಎಂದು ನನಗೆ ಚಾಸಾಃ 5 ಮತ್ತು ನಮ್ಮ ಮ್ಯಾನೇಜರ್ ರವರು ತಿಳಿಸಿದ್ದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ.